**ಆರ್‌ಬಿಐ ಒಪ್ಪಿಗೆ ಕೊಟ್ಟಿರುವ ಪುನರ್ರಚನೆಯ ಸ್ಕೀಮ್ ಎಂದರೇನು?**

ಪುನರ್ರಚನೆಯ ಸ್ಕೀಮ್ ಎಂಬುದು ಕೋವಿಡ್-19 ಪಿಡುಗಿನ ಕಾರಣವಾಗಿ ಉಂಟಾದ ಪ್ರತಿಕೂಲ ಆರ್ಥಿಕ ಪರಿಣಾಮದಿಂದ ಗ್ರಾಹಕರು ಎದುರಿಸುತ್ತಿರುವ ಒತ್ತಡವನ್ನು ನಿವಾರಿಸಲು ಆರ್‌ಬಿಐ ಸಾಲ ಕೊಡುವ ಸಂಸ್ಥೆಗಳಿಗೆ ಸಲಹೆ ನೀಡಿರುವ ಪರಿಹಾರದ ಚೌಕಟ್ಟಾಗಿದೆ. ಆರ್‌ಬಿಐ ನೀಡಿದ ಮಾರ್ಗಸೂಚಕಗಳ ಅಂತರ್ಗತವಾಗಿ, ಏಬಿಎಫ್‌ಎಲ್ ಕೋವಿಡ್-19 ಪಿಡುಗಿನ ಕಾರಣವಾಗಿಯೇ ಆರ್ಥಿಕ ದುಷ್ಪರಿಣಾಮಕ್ಕೊಳಗಾಗಿರುವ ವ್ಯಕ್ತಿಗಳ ಹಾಗೂ ಎಂಟಿಟಿಗಳ ಸಾಲವನ್ನು[ಗಳನ್ನು] ಪುನರ್ರಚಿಸಲು ಒಂದು ಪಾಲಿಸಿಯನ್ನು ರೂಪಿಸಿದೆ.

**ಪುನರ್ರಚನೆಗೆ ಯಾರು ಅರ್ಹರು?**

- 01 ಮಾರ್ಚ್ 2020ರ ವರೆಗೆ ಏಬಿಎಫ್‌ಎಲ್-ನೊಂದಿಗೆ 30ಕ್ಕೂ ಹೆಚ್ಚು ದಿನ ಸಾಲದ ಕಂತು ಕಟ್ಟುವುದನ್ನು ತಪ್ಪಿಸಿಕೊಂಡಿಲ್ಲದ ಮತ್ತು ಸ್ಟ್ಯಾಂಡರ್ಡ್ ಎಂದು ವರ್ಗೀಕರಿಸಲಾಗಿರುವ ಹಾಗೂ ಏಬಿಎಫ್‌ಎಲ್-ನ ಎಲ್ಲಾ ಸಾಲಗಳಲ್ಲಿಯೂ ಸ್ಟ್ಯಾಂಡರ್ಡ್ ಆಗಿಯೇ ಮುಂದುವರಿದಿರುವ ವ್ಯಕ್ತಿಗಳು ಹಾಗೂ ಎಂಟಿಟಿಗಳು ಪುನರ್ರಚನೆಗೆ ಅರ್ಹರು.
- ಗ್ರಾಹಕರು ಕೋವಿಡ್-19 ಪಿಡುಗಿನಿಂದಾಗಿ ಆದಾಯ ಅಥವಾ ನಗದು ಸಂಗ್ರಹಣೆ ಕಡಿಮೆಯಾದ ಅಥವಾ ಇಲ್ಲವಾದ ಕಾರಣ ಆರ್ಥಿಕ ದುಷ್ಪರಿಣಾಮಕ್ಕೆ ಒಳಗಾಗಿರಬೇಕು.
- ಸಾಲ ವೈಯಕ್ತಿಕ ಬಳಕೆಗಾಗಿ ಆಗಿರಬೇಕು.
- ಏಬಿಎಫ್‌ಎಲ್ ಪುನರ್ರಚನೆಯನ್ನು ಮಂಜೂರು ಮಾಡುವ ಮೊದಲು, ನಗದು ಸಂಗ್ರಹಣೆ ಕಡಿಮೆಯಾಗಿರುವುದನ್ನು ಮತ್ತು ಇಎಮ್‌ಐ-ಗಳ ಪುನರ್ರಚನೆಯ ಸರ್ವೀಸ್‌ನ ಪ್ರಾಯೋಗಿಕ ಸಾಧ್ಯತೆಯನ್ನು ಮೌಲ್ಯಾಂಕನ ಮಾಡುತ್ತದೆ. ಗ್ರಾಹಕರೊಂದಿಗೆ ವಿಚಾರ-ವಿಮರ್ಶೆ, ದಾಖಲೆಪತ್ರಗಳ ಮೌಲ್ಯಾಂಕನ ಮತ್ತು ಗ್ರಾಹಕರ ಒಟ್ಟು ಸಾಲ ವಾಪಸಾತಿಯ ದಾಖಲೆ, ಇವು ಏಬಿಎಫ್‌ಎಲ್ ಸಾಲದ ಪುನರ್ರಚನೆಗೆ ಒಪ್ಪುವ ನಿರ್ಧಾರದ ಮೇಲೆ ಪರಿಣಾಮ ಮಾಡುತ್ತವೆ.

**ಯಾವ ರೀತಿಯ ಸಾಲಗಳು ಪುನರ್ರಚನೆಗೆ ಅರ್ಹವಲ್ಲ?**

ವ್ಯಕ್ತಿಗಳಿಗೆ ಹಾಗೂ ಎಂಟಿಟಿಗಳಿಗೆ ನೀಡಿರುವ ಈ ಸಾಲಗಳು -

- ಕೃಷಿ ಉದ್ದೇಶಗಳು ಮತ್ತು ಬ್ಯಾಂಕಿನಿಂದ ಕೃಷಿ ಸಾಲಗಳು ಎಂದು ವರ್ಗೀಕರಿಸಲಾದ ಸಾಲಗಳು
- ಕೃಷಿಯ ಕ್ರೆಡಿಟ್ ಸೊಸೈಟಿಗಳು
- ಫೈನ್ಯಾನ್ಶಿಯಲ್ ಸರ್ವೀಸ್ ಪ್ರವೈಡರ್‌ಗಳು
- ಕೇಂದ್ರದ, ರಾಜ್ಯದ ಮತ್ತು ಸ್ಥಳೀಯ ಸರ್ಕಾರೀ ಸಂಸ್ಥೆಗಳು
- ಏಬಿಎಫ್‌ಎಲ್ ನೌಕರರು
- ಈಗಾಗಲೇ ರೀಶೆಡ್ಯೂಲ್ ಮಾಡಿರುವ ಹೌಸಿಂಗ್ ಫೈನಾನ್ಸ್ ಕಂಪನಿಗಳ ಸಾಲಗಳು

ವಾಣಿಜ್ಯ ಬಳಕೆಗಾಗಿ ಕೊಟ್ಟಿರುವ ಸಾಲಗಳು [ಒಟ್ಟು 25 ಕೋಟಿಗಿಂತ ಕಡಿಮೆ ಮೊತ್ತದ ಸಾಲದ ಎಮ್‌ಎಸ್‌ಎಮ್‌ಇ ಪುನರ್ರಚನೆ] ಎಂಬ ಅಂಶದಲ್ಲಿ ವಿವರಿಸಲಾಗಿರುವ ಎಮ್‌ಎಸ್‌ಎಮ್‌ಇ ಮಾರ್ಗಸೂಚಕಗಳ ಅಡಿಯಲ್ಲಿ ಪರಿಹಾರಕ್ಕೆ ಕ್ಲೇಮ್ ಮಾಡಬಹುದು.

ಕಾರ್ಪೊರೇಟ್ ಸಾಲಗಾರರಿಗೆ [25 ಕೋಟಿಗಿಂತ ಹೆಚ್ಚು], ಕನ್ಸೋರ್ಟಿಯಮ್ ಮಟ್ಟದಲ್ಲಿ ಪುನರ್ರಚಿತ ಮಾರ್ಗಸೂಚಕಗಳನ್ನು ನೀಡಲಾಗಿದೆ.

**ನಾನು ನನ್ನ ಸಾಲದ ಮೇಲೆ ಪುನರ್ರಚನೆಯ ಪ್ರಯೋಜನವನ್ನು ಹೇಗೆ ಪಡೆದುಕೊಳ್ಳಬಹುದು?**

**ನೀವು ಅಗತ್ಯವಿರುವ ದಾಖಲೆಪತ್ರಗಳೊಂದಿಗೆ ನಮ್ಮ ಕಸ್ಟಮರ್ ಸರ್ವೀಸ್ ತಂಡಕ್ಕೆ ಈ ಕೆಳಗೆ ಹೇಳಿರುವ ಪ್ರಕಾರ ಬರೆಯಬಹುದು :**

ನೀವು ಸಾಲಕ್ಕೆ ಆಫ್‌ಲೈನ್ ವಿಧಾನದಿಂದ ಅರ್ಜಿ ಹಾಕಿದ್ದರೆ, ಇಲ್ಲಿಗೆ: care.finance@adityabirlacapital.com

ನೀವು ಸಾಲಕ್ಕೆ ಆನ್‌ಲೈನ್ ವಿಧಾನದಿಂದ ಅರ್ಜಿ ಹಾಕಿದ್ದರೆ, ಇಲ್ಲಿಗೆ: care.digitalfinance@adityabirlacapital.com

**ನನಗೆ ಲಭ್ಯವಿರುವ ಪುನರ್ರಚನೆಯ ಆಪ್ಷನ್‌ಗಳು ಯಾವುವು?**
ತಿಂಗಳ ಇಎಮ್‌ಐ-ಯನ್ನು ಕಡಿಮೆ ಮಾಡುವ ಸಲುವಾಗಿ, ಸಾಲದ ಉಳಿದ ಅವಧಿಯನ್ನು ಗರಿಷ್ಠ 24 ತಿಂಗಳ ಕಾಲ ವಿಸ್ತರಿಸಬಹುದು.

**ಪುನರ್ರಚನೆಯ ಪ್ರಯೋಜನ ಪಡೆದುಕೊಳ್ಳುವುದಕ್ಕೆನಾನು ಏನಾದರೂ ದಾಖಲೆಪತ್ರಗಳನ್ನು ಸಲ್ಲಿಸಬೇಕಾಗುತ್ತದೆಯೇ?**
ನೀವು ಎಬಿಎಫ್‌ಎಲ್-ಗೆ ನಿಮ್ಮ ಈಗಿನ ಉದ್ಯೋಗ ಅಥವಾ ಬಿಸಿನೆಸ್‌ನ ಸ್ಥಿತಿಗತಿಯ ಬಗ್ಗೆ ವಿವರಗಳನ್ನು ಕೊಡುವ ದಾಖಲೆಪತ್ರಗಳನ್ನು ಸಲ್ಲಿಸಬೇಕಾಗುತ್ತದೆ. ಸಂಬಳದ/ಸ್ವಂತ-ಉದ್ಯೋಗದ ಸಾಲಗಾರರು ಬ್ಯಾಂಕ್ ಸ್ಟೇಟ್‌ಮೆಂಟ್‌ಗಳು, ಐಟಿಆರ್, ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸಬೇಕಾಗಬಹುದು. ಅಲ್ಲದೆಯೆ, ನಿಮ್ಮ ಒಟ್ಟು ಹಣಕಾಸಿನ ಸ್ಥಿತಿಯ ಬಗ್ಗೆ ವಿಚಾರ-ವಿಮರ್ಶೆ ನಡೆಸುವುದಕ್ಕಾಗಿ ಎಬಿಎಫ್‌ಎಲ್ ತಂಡವು ನಿಮ್ಮನ್ನು ಸಂಪರ್ಕಿಸುತ್ತದೆ.

**ಪುನರ್ರಚನೆಯ ಪ್ಯಾಕೇಜನ್ನು ನಾನು ಆಯ್ದುಕೊಂಡರೆ, ಅದರಿಂದ ನನ್ನ ಕ್ರೆಡಿಟ್ ಬ್ಯೂರೋ ವರದಿ ಮೇಲೆ ಪರಿಣಾಮವಾಗುತ್ತದೆಯೇ?**
ರೆಗ್ಯುಲೇಟರಿ ಮಾರ್ಗಸೂಚಕಗಳ ಪ್ರಕಾರ, ನಿಮಗೆ ನೀಡಿರುವ ಸಾಲದ / ಕ್ರೆಡಿಟ್‌ನ ಸೌಲಭ್ಯವನ್ನು "ಪುನರ್ರಚಿಸಲಾಗಿದೆ" ಎಂದು ಕ್ರೆಡಿಟ್ ಬ್ಯೂರೋಗೆ ವರದಿ ಮಾಡಲಾಗುತ್ತದೆ.

ರೆಗ್ಯುಲೇಟರಿ ಮಾರ್ಗಸೂಚಕಗಳ ಪ್ರಕಾರ, ಪುನರ್ರಚನೆಯನ್ನು ಸಾಲಗಾರನ ಮಟ್ಟದಲ್ಲಿ ಕ್ರೆಡಿಟ್ ಬ್ಯೂರೋಗಳಿಗೆ ವರದಿ ಮಾಡಬೇಕಾಗುತ್ತದೆ; ಆದ್ದರಿಂದ ಸಾಲಗಾರನಿಗೆ ಬ್ಯಾಂಕ್ ನೀಡಿರುವ ಎಲ್ಲಾ ಸೌಲಭ್ಯಗಳನ್ನು / ಸಾಲಗಳನ್ನು ವರ್ಗೀಕರಿಸಲಾಗುತ್ತದೆ ಮತ್ತು ಸಾಲಗಾರನು ಒಂದು ಸಾಲಕ್ಕೆ ಮಾತ್ರ ಪುನರ್ರಚನೆಯನ್ನು ತೆಗೆದುಕೊಂಡಿದ್ದರೂ, "ಪುನರ್ರಚಿಸಲಾಗಿದೆ" ಎಂದು ವರದಿ ಮಾಡಲಾಗುತ್ತದೆ.

**ನನ್ನ ಸಾಲವನ್ನು ನಾನು ಪುನರ್ರಚಿಸಿಕೊಂಡರೆ, ಅದಕ್ಕೆ ಏನಾದರೂ ಪ್ರಾಸೆಸ್ ಮಾಡುವ ಫೀಸು ಅಥವಾ ಚಾರ್ಜುಗಳು ಇರುತ್ತವೆಯೇ?**

ನಿಮ್ಮ ಸಾಲವನ್ನು ನೀವು ಪುನರ್ರಚಿಸಿಕೊಳ್ಳುವ ಆಯ್ಕೆಯನ್ನು ಮಾಡಿದರೆ, ಎಬಿಎಫ್‌ಎಲ್ ಅದಕ್ಕೆ ಫೀಸನ್ನು ವಿಧಿಸಬಹುದು.

**ನಾನು ಎಬಿಎಫ್‌ಎಲ್-ನಿಂದ ಅನೇಕ ಸಾಲಗಳನ್ನು ತೆಗೆದುಕೊಂಡಿದ್ದೇನೆ. ನಾನು ಈ ಪ್ರತಿಯೊಂದು ಸಾಲಕ್ಕೂ ಪ್ರತ್ಯೇಕವಾಗಿ ಅರ್ಜಿ ಹಾಕಬೇಕೇ?**

ಈ ಸೌಲಭ್ಯವನ್ನು ನೀವು ಒಂದು ಬಾರಿ ಮಾತ್ರ ಪಡೆದುಕೊಳ್ಳಬಹುದು; ಆದ್ದರಿಂದ, ನೀವು ಎಲ್ಲಾ ಸೌಲಭ್ಯಗಳ ಪುನರ್ರಚನೆಗೆ ಒಂದೇ ಬಾರಿಯಲ್ಲಿ ಅರ್ಜಿ ಹಾಕಬೇಕಾಗುತ್ತದೆ.

**ಪುನರ್ರಚನೆಯ ಸೌಲಭ್ಯವನ್ನು ಬಳಸಿಕೊಳ್ಳುವುದಕ್ಕೆ , ಏನಾದರೂ ಕನಿಷ್ಠ ಬಾಕಿಯ ಮೊತ್ತದ ಮಿತಿಯಿದೆಯೇ?**
ಎಲ್ಲಾ ಸೌಲಭ್ಯಗಳಿಗೂ ಸಲ್ಲುವಂತೆ, ಸೌಲಭ್ಯದ ಪುನರ್ರಚನೆಗೆ, ಬಾಕಿಯ ಮೊತ್ತ ಕನಿಷ್ಠ ರೂ.25,000 ಇರಬೇಕು.

**ನಾನು ಸ್ವಂತ-ಉದ್ಯೋಗಿ / ಎಮ್ಎಸ್ಎಮ್ಇ ಯೂನಿಟ್. ನಾನು ಈ ಪರಿಹಾರಕ್ಕೆ ಅರ್ಹನೇ?**

ಭಾರತ ಸರ್ಕಾರವು ಹೊರತಂದಿರುವ ಎಮ್ಎಸ್ಎಮ್ಇ ವರ್ಗೀಕರಣದ ಪರಿಷ್ಕೃತ ಮಾರ್ಗಸೂಚಕಗಳ ಪ್ರಕಾರ, ಎಮ್ಎಸ್ಎಮ್ಇ ವರ್ಗಕ್ಕೆ ಸೇರಿದ ಸ್ವಂತ-ಉದ್ಯೋಗದ ವ್ಯಕ್ತಿಗಳು / ಎಂಟಿಟಿಗಳು ಎಮ್ಎಸ್ಎಮ್ಇ ಪುನರ್ರಚನೆಯ ಸ್ಕೀಮಿನ ಅಡಿಯಲ್ಲಿ ಪರಿಹಾರಕ್ಕೆ ಅರ್ಜಿ ಹಾಕಬಹುದು. ಹೆಚ್ಚಿನ ವಿವರಗಳಿಗೆ ನೀವು ನಿಮ್ಮ ರಿಲೇಶನ್‌ಶಿಪ್ ಮ್ಯಾನೇಜರ್‌ರನ್ನು ಅಥವಾ ಕಸ್ಟಮರ್ ಸರ್ವೀಸ್ ಟೀಮನ್ನು [ವಿವರಗಳನ್ನು ಮೇಲೆ ಕೊಡಲಾಗಿದೆ] ಸಂಪರ್ಕಿಸಬಹುದು.

ಉದ್ಯಮ್ ಪೋರ್ಟಲ್ ಲಿಂಕ್ : https://udyamregistration.gov.in/Government-of-India/Ministry-of-MSME/online-registration.htm

**ನಾನು ಸಾಲದ ವಾಪಸಾತಿಯ ಮೇಲಿನ ತಾತ್ಕಾಲಿಕ ತಡೆಯನ್ನು ಬಳಸಿಕೊಂಡಿದ್ದರೆ / ಬಳಸಿಕೊಂಡಿರದಿದ್ದರೆ, ನಾನು ಪುನರ್ರಚನೆಗೆ ಅರ್ಜಿ ಹಾಕಬಹುದೇ?**

ಪುನರ್ರಚನೆಯ ಸ್ಕೀಮು, ತಾತ್ಕಾಲಿಕ ತಡೆಯ ಸ್ಥಿತಿಗತಿ ಏನೇ ಇರಲಿ, ಬ್ಯಾಂಕಿನ ಎಲ್ಲಾ ಗ್ರಾಹಕರಿಗೂ ತೆರೆದಿರುತ್ತದೆ; ಆದರೆ, ಪುನರ್ರಚನೆಯ ನಿರ್ಧಾರವು ಸಂಪೂರ್ಣವಾಗಿ ಎಬಿಎಫ್ಎಲ್-ನ ವಿವೇಚನೆಗೆ ಸೇರಿರುತ್ತದೆ.

**ಎಲ್ಲಾ ಸಾಲಗಾರರು / ಸಹ-ಸಾಲಗಾರರು ಪುನರ್ರಚನೆಗೆ ಅರ್ಜಿ ಹಾಕಬೇಕೇ ಅಥವಾ ಪುನರ್ರಚನೆಯ ಆಪ್ಷನ್‌ಗೆ ಸಾಲಗಾರನು ಮಾತ್ರ ಅರ್ಜಿ ಹಾಕಬಹುದೇ?**
ರೆಗ್ಯುಲೇಟರಿ ಮತ್ತು ಕಾನೂನೀ ಅವಶ್ಯಕತೆಗಳ ಪ್ರಕಾರ, ಮೂಲ ಸಾಲದ ಎಲ್ಲಾ ಸಾಲಗಾರರು / ಸಹ-ಸಾಲಗಾರರು, ಸಾಲದ ಮುಖ್ಯ ಕರಾರಿನ ಅನುಬಂಧದ ಶರತ್ತುಗಳನ್ನು ಒಪ್ಪಿಕೊಳ್ಳುವುದೂ ಸೇರಿದಂತೆ, ಸಾಲದ ತಿದ್ದುಪಡಿ ಮಾಡಲಾದ ನಿಯಮಗಳು ಹಾಗೂ ಶರತ್ತುಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ.

**ಪುನರ್ರಚನೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಯಾವುದು?**
ಹೆಚ್ಚೆಂದರೆ 15 ಡಿಸೆಂಬರ್ 2020ರ ವರೆಗೆ ನೀವು ಅರ್ಜಿ ಸಲ್ಲಿಸಬಹುದು, ಅದರಿಂದ ಪುನರ್ರಚನೆಯ ನಿರ್ಧಾರ ಮತ್ತು ದಾಖಲಿಸಿಕೊಳ್ಳುವುದನ್ನು ರೆಗ್ಯುಲೇಟರ್‌ರು ನಿರ್ಬಂಧಪಡಿಸಿರುವ 31 ಡಿಸೆಂಬರ್ 2020ರ ಅಂತಿಮ ದಿನಾಂಕದ ಹೊತ್ತಿಗೆ ಮುಗಿಸಬಹುದು.